ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕೋಲಾರ

Spl.C. Corruption 4/2020

ಫ್ರಾಸಾಃ **2** ಚಾಸಾಃ **11**

ದಿನಾಂಕಃ **17-05-2022**

ಸಾಕ್ಷಿ ಕ್ರಮವಾಗಿ ಪ್ರಮಾಣ ವಚನ ಮಾಡಿದನು

| | | |
|---|---|---|
| ಹೆಸರು | ಃ- | ಹನುಮಪ್ಪ |
| ತಂದೆಯ ಹೆಸರು | ಃ- | ಮುನಿಯಪ್ಪ |
| ವಯಸ್ಸು | ಃ- | 52 ವರ್ಷಗಳು |
| ಉದ್ಯೋಗ | ಃ- | ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ಮುಳಬಾಗಿಲು |
| ವಾಸ ಸ್ಥಳ | ಃ- | ಕಮ್ಮಸಂದ್ರ |

ಮುಖ್ಯ ವಿಚಾರಣೆಃ ಶ್ರೀ ಎನ್.ರಾಮಚಂದ್ರಯ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ

ನಾನು 2012 ರಿಂದ 2018 ರವರೆಗೆ ನಾನು ಬಂಗಾರಪೇಟೆ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿಯಲ್ಲಿ ಸಹಾಯಕ ಅಭಿಯಂತರನಾಗಿ ಕೆಲಸ ಮಾಡುವಾಗ ನನಗೆ ಈಗ ತೋರಿಸಿದ ನಕಾಶೆ ತಯಾರಿಸಿ ಕೊಟ್ಟಿದ್ದೇನೆ, ಸದರಿ ನಕ್ಷೆಯನ್ನ ಅ.ನಿ-31 ಅಂತ ಗುರುತಿಸಲಾಯಿತು. ಸಾಕ್ಷಿ ತನ್ನದೆಂದು ಗುರುತಿಸಿದ ಸಹಿಯನ್ನ ಅ.ನಿ-31(ಎ) ಅಂತ ಗುರುತಿಸಲಾಯಿತು.

ಕೋಲಾರ ಎಸಿಬಿಯವರು 03-11-2018 ರಂದು ನಮ್ಮ ಕಛೇರಿಗೆ ಒಂದು ನಿವೇದನಾ ಪತ್ರ ಸಲ್ಲಿಸಿ ಕೃತ್ಯ ಸ್ಥಳದ ನಕ್ಷೆ ತಯಾರಿಸಿಕೊಡಲು ಕೇಳಿದ್ದರು.

ಎಸಿಬಿ ಪೊಲೀಸರು ನಮ್ಮ ನೆರಳು ಸಾಕ್ಷಿ ಶ್ರವಣ್ ಕುಮಾರ್ ದಿನಾಂಕಃ 03-11-2018 ರಂದು ನನ್ನನ್ನ ಸ್ಥಳಕ್ಕೆ ಕರೆದುಕೊಂಡು ಹೋಗಿ ವಿವರಗಳನ್ನ ನೀಡಿ ನಕ್ಷೆ ತಯಾರಿಸಲು ಹೇಳಿದರು. ನಾನು ಸ್ಥಳದಲ್ಲಿ ಕರಡು ನಕ್ಷೆ ತಯಾರಿಸಿದೆನು. ಅದಕ್ಕೆ ನೆರಳು ಸಾಕ್ಷಿದಾರನ ಸಹಿ ಪಡೆದನು. ಕಛೇರಿಗೆ ವಾಪಸ್ಸು ಬಂದು ಮೇಲ್ಕಂಡ ಅ.ನಿ-31 ರ ನಕ್ಷೆಯನ್ನ ತಯಾರಿಸಿ ಕಳುಹಿಸಿಕೊಟ್ಟೆನು. ಸದರಿ ನಕ್ಷೆಗೆ ನೆರಳು ಸಾಕ್ಷಿ ಶ್ರವಣ್ ಕುಮಾರ್ ಸಹಿ ಮಾಡಿದ್ದಾರೆ. ಬಿಇಓ ಕಛೇರಿಯಲ್ಲಿ ಈ ಕೃತ್ಯ ಸ್ಥಳ ಇತ್ತು. ಈ ನಕ್ಷೆಯಲ್ಲಿ ಹಣ ಸ್ವೀಕರಿಸಿದ ವ್ಯಕ್ತಿ ಕುಳಿತ ಸ್ಥಳ ಮತ್ತು ಹಣ ನೀಡಿದ ವ್ಯಕ್ತಿ ನಿಂತಿದ್ದ ಸ್ಥಳ ಮತ್ತು ನೆರಳು ಸಾಕ್ಷಿ ನಿಂತಿದ್ದ ಸ್ಥಳ, ಇಲಾಖಾ ಜೀಪು ನಿಂತಿದ್ದ ಸ್ಥಳ ಇತ್ಯಾದಿ ವಿವರಗಳನ್ನ ಬರೆದಿದ್ದೇನೆ.

<u>ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಮಹಮದ್ ಹನೀಫ್ ವಕೀಲರಿಂದಃ</u>

ಶಾಲಾ ಕಟ್ಟಡ ಮತ್ತು ಬಿಇಓ ಕಛೇರಿ ಒಂದೇ ಆವರಣದಲ್ಲಿದೆ. ಈ ಕಛೇರಿಯ ಬಳಿ ಯಾವುದೇ ರೇಲ್ವೆ ಹಳಿ ಇರುವುದಿಲ್ಲ. ಬಿಇಓ ಕಛೇರಿ ಇರುವ ಕಟ್ಟಡ ಹಳೆಯದಾಗಿದೆ ಎನ್ನುವುದು ಸರಿ. ಈ ಕಟ್ಟಡದ ಎತ್ತರ ಹತ್ತು ಅಡಿಗಳು ಇವೆ. ಕಟ್ಟಡದ ಪೂರ್ಣ ಅಳತೆಯನ್ನ ನಾನು ಮಾಡಿಲ್ಲ. ವಾಹನ ನಿಂತ ಸ್ಥಳ ಕಟ್ಟಡದಿಂದ 50 ಅಡಿಗಳು ದೂರದಲ್ಲಿದೆ. ಬಿಇಓ ಕಛೇರಿಯ ಕಟ್ಟಡಕ್ಕೆ ಪ್ರವೇಶ ಒಂದೇ ಕಡೆ ಇದೆ. ಆ ಕಛೇರಿಗೆ ಪ್ರವೇಶಿಸಬೇಕಾದರೆ ಒಂದೇ ಬಾಗಿಲಿನಿಂದ ಬರಬೇಕು ಎನ್ನುವುದು ಸರಿ.

ಆ ಕಟ್ಟಡದಲ್ಲಿ ಬೇರೆ ಸರ್ಕಾರಿ ಸಿಬ್ಬಂದಿಗಳು ಇರುತ್ತಾರೆ ಎನ್ನುವುದು ಸರಿ. ಬಿಇಓ ಕಛೇರಿ ಒಂದು ಕಟ್ಟಡದ ಹಾಲಿನಲ್ಲಿದೆ ಎನ್ನುವುದು ಸರಿ. ಈ ಹಾಲಿನ ಪಕ್ಕದಲ್ಲಿ ತೆರೆದ ಜಾಗವಿದ್ದು ಅದನ್ನ ಬೀರುಗಳಿಂದ ಅಡ್ಡ ಮಾಡಲಾಗಿದೆ. ಆರು ಬೀರುಗಳನ್ನ ಜೋಡಿಸಲಾಗಿದೆ. ಕಿಟಕಿಯ ಪಕ್ಕದಲ್ಲಿ ಮೂರು ಬೀರುಗಳಿವೆ. ನಾನು ಜಾಗಕ್ಕೆ ಹೋದಾಗ ಕಛೇರಿಯ ಸಿಬ್ಬಂದಿಗಳು ಇದ್ದರು. ಸಂಜೆ 04-30 ಘಂಟೆಗೆ ನಾನು ಸ್ಥಳಕ್ಕೆ ಹೋಗಿದ್ದೆ. ಎಸಿಬಿಯವರು ಶ್ರವಣ್ ಕುಮಾರ್ ರವರನ್ನ ಆ ಸ್ಥಳಕ್ಕೆ ಕರೆಸಿದ್ದರು. ನಾನು ಮೇಲ್ಕಂಡ ದಿನ ಬಿಇಓ ಕಛೇರಿಗೆ ಹೋಗಿಲ್ಲ ಮತ್ತು ನಕ್ಷೆಯನ್ನ ತಯಾರಿಸಿಲ್ಲ ಎನ್ನುವುದು ಸರಿಯಲ್ಲ. ಎಸಿಬಿಯವರ ನಿವೇದನೆಯಂತೆ ಸುಳ್ಳು ನಕಾಶೆಯನ್ನ ತಯಾರು ಮಾಡಿಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ</u> ವಿಶೇಷ ಸಾರ್ವಜನಿಕ ಅಭಿಯೋಜಕರಿಂದ ಏನು ಇಲ್ಲ,

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

SD/-

(ಕೆ.ಆರ್.ನಾಗರಾಜ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.